☎ 0836 - 2224098, 2224195
2224301, 2222616
2224274, 2222505

# ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ – 580 025

ಕ್ರ.ಸಂ.: ಹು.ಧಾ.ನ.ಪ್ರಾ : ಅ.ವಿ/ಗೋಕುಲ/2023-24 / 4096 ದಿನಾಂಕ : 26-12-2023

ಗೆ,
ಮೆ॥ ನ್ಯೂಜನ್ ಹೋಮ್ಸ್ ಇದರ ತರ್ಫೆ ಮ್ಯಾನೇಜಿಂಗ್
ಪಾರ್ಟನರ ಶ್ರೀ ಮಂಜುನಾಥ ತಂದೆ ತಮ್ಮಣ್ಣ ಅರಳಿಕಟ್ಟಿ,
ಹಾಗೂ ಇತರರು ನ್ಯೂಜನ್ ಹೋಮ್ಸ್ # 115 ಮೊದಲನೇ ಮಹಡಿ,
ಮಾರವೇಲ್ ಸಿಗ್ನೇಂಚ, ಕರ್ನಾಟಕ ಬ್ಯಾಂಕ ಎದುರುಗಡೆ, ಶಿರೂರ ಪಾರ್ಕ
ವಿದ್ಯಾನಗರ, ಹುಬ್ಬಳ್ಳಿ-580031

ಮಾನ್ಯರೇ,

ವಿಷಯ : ಹುಬ್ಬಳ್ಳಿ ತಾಲೂಕ ಗೋಕುಲ ಗ್ರಾಮದ ರಿ.ಸ.ನಂ 265/1 ಕ್ಷೇತ್ರ 04ಎಕರೆ 265/2 ಕ್ಷೇತ್ರ 04ಎಕರೆ, 265/3 ಕ್ಷೇತ್ರ 04ಎಕರೆ, 265/4 ಕ್ಷೇತ್ರ 03ಎ-27ಗು ಪೈಕಿ (02ಗು 'ಅ' ಖರಾಬ ಹೊರತುಪಡಿಸಿ) 03ಎ-25ಗು, 264/8 ಕ್ಷೇತ್ರ 03ಎ-12ಗು ಪೈಕಿ (12ಗು 'ಅ' ಖರಾಬ ಹೊರತುಪಡಿಸಿ) 03ಎಕರೆ, 264/9 ಕ್ಷೇತ್ರ 03ಎ-12ಗು ಪೈಕಿ (12ಗು 'ಅ' ಖರಾಬ ಹೊರತುಪಡಿಸಿ) 03ಎಕರೆ ಹಾಗೂ 264/10 ಕ್ಷೇತ್ರ 03ಎ-12ಗು ಪೈಕಿ (12ಗು 'ಅ' ಖರಾಬ ಹೊರತುಪಡಿಸಿ) 03ಎಕರೆ ನೇದ್ದರವುಗಳ ಒಟ್ಟು ಕ್ಷೇತ್ರ 24ಎ-25ಗು ಪ್ರದೇಶದಲ್ಲಿ ವಸತಿ ಉದ್ದೇಶಕ್ಕಾಗಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳಿಗೆ ಪರವಾನಿಗೆ ನೀಡುವ ಕುರಿತು.

ಉಲ್ಲೇಖ : 1. ಚಲನ ನಂ. 08339 ದಿನಾಂಕ : 12-05-2023
2. ಚಲನ ನಂ. 15140 ದಿನಾಂಕ : 18-12-2023

***********

ಮೇಲ್ಕಾಣಿಸಿದ ವಿಷಯದಲ್ಲಿ ತಿಳಿಸಿದ : ಹುಬ್ಬಳ್ಳಿ ತಾಲೂಕ ಗೋಕುಲ ಗ್ರಾಮದ ರಿ.ಸ.ನಂ 265/1 ಕ್ಷೇತ್ರ 04ಎಕರೆ 265/2 ಕ್ಷೇತ್ರ 04ಎಕರೆ, 265/3 ಕ್ಷೇತ್ರ 04ಎಕರೆ, 265/4 ಕ್ಷೇತ್ರ 03ಎ-27ಗು ಪೈಕಿ (02ಗು 'ಅ' ಖರಾಬ ಹೊರತುಪಡಿಸಿ) 03ಎ-25ಗು, 264/8 ಕ್ಷೇತ್ರ 03ಎ-12ಗು ಪೈಕಿ (12ಗು 'ಅ' ಖರಾಬ ಹೊರತುಪಡಿಸಿ) 03ಎಕರೆ, 264/9 ಕ್ಷೇತ್ರ 03ಎ-12ಗು ಪೈಕಿ (12ಗು 'ಅ' ಖರಾಬ ಹೊರತುಪಡಿಸಿ) 03ಎಕರೆ ಹಾಗೂ 264/10 ಕ್ಷೇತ್ರ 03ಎ-12ಗು ಪೈಕಿ (12ಗು 'ಅ' ಖರಾಬ ಹೊರತುಪಡಿಸಿ) 03ಎಕರೆ ನೇದ್ದರವುಗಳ ಒಟ್ಟು ಕ್ಷೇತ್ರ 24ಎ-25ಗು ಪ್ರದೇಶದಲ್ಲಿ ವಸತಿ ಉದ್ದೇಶಕ್ಕಾಗಿ ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ನೀವೇ ಮಾಡಿಕೊಳ್ಳುವ ಕುರಿತು ಈ ಕೆಳಗೆ ಕಾಣಿಸಿದ ಕರಾರುಗಳೊಂದಿಗೆ ನಿಮಗೆ ಪರವಾನಿಗೆಯನ್ನು ನೀಡಲಾಗಿದೆ.

1. ಅಂಗೀಕರಿಸಿದ ವಿನ್ಯಾಸದ ನಕ್ಷೆಯಂತೆ ಜಮೀನಿನ ಮೇಲೆ ರಸ್ತೆಗಳನ್ನು ಗುರುತಿಸಿ ಪ್ರಾಧಿಕಾರದ ಅಭಿಯಂತರರಿಗೆ ತೋರಿಸತಕ್ಕದ್ದು. ಸುತ್ತಲಿನ ವಿನ್ಯಾಸದಲ್ಲಿಯ ರಸ್ತೆಗಳಿಗೆ ನಿಮ್ಮ ವಸತಿ ವಿನ್ಯಾಸದ ರಸ್ತೆಗಳು ಹೊಂದದಿದ್ದಲ್ಲಿ ವಿನ್ಯಾಸವನ್ನು ಮಾರ್ಪಡಿಸಿಕೊಳ್ಳತಕ್ಕದ್ದು.

2. ವಿದ್ಯುತ್ ಪೂರೈಕೆ ಕೆಲಸಗಳ ಸಲುವಾಗಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ (ಹೆಸ್ಕಾಂ) ಹುಬ್ಬಳ್ಳಿ ಇವರನ್ನು ಸಂಪರ್ಕಿಸಿ ಅವರ ಮೇಲ್ವಿಚಾರಣೆಯಲ್ಲಿ ಅವರ ನಿರ್ದೇಶನದಂತೆ ಸದರಿ ಕೆಲಸಗಳನ್ನು ಪೂರೈಸಬೇಕು. ಈ ಎಲ್ಲ ಕೆಲಸಗಳು ಮುಗಿದ ನಂತರ ಹೆಸ್ಕಾಂ ಹುಬ್ಬಳ್ಳಿ ಇವರಿಂದ ಕೆಲಸಗಳು ತೃಪ್ತಿಕರವಾಗಿ ಮುಗಿಸಿದ ಬಗ್ಗೆ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆದು, ಪ್ರಾಧಿಕಾರಕ್ಕೆ ಅಂತಿಮ ಮುಕ್ತಾಯ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸುವಾಗ ಅವುಗಳನ್ನು ಸಲ್ಲಿಸತಕ್ಕದ್ದು.

3. ಸಿವ್ಹಿಲ್ ಕೆಲಸಗಳನ್ನು ಅಂದರೆ ರಸ್ತೆ ನಿರ್ಮಾಣ, ಡಾಂಬರೀಕರಣ, ಕಾಂಕ್ರೀಟ ಗಟಾರ, ಅಡ್ಡಗಾಲುವೆ ನಿರ್ಮಾಣ ಹಾಗೂ ಉದ್ಯಾನವನ ಕ್ಷೇತ್ರಕ್ಕೆ ಕಡ್ಡಾಯವಾಗಿ ಎಮ್ ಎಸ್ ಗ್ರೀಲ್‌ವುಳ್ಳ ಆವರಣಗೋಡೆ ನಿರ್ಮಿಸುವ ಕಾಮಗಾರಿಗಳನ್ನು ಪರವಾನಿಗೆಯಲ್ಲಿ ನಮೂದಿಸಿದ ಅವಧಿಯಲ್ಲಿ ಮುಗಿಸಬೇಕು. ರಸ್ತೆ ಮತ್ತು ಉದ್ಯಾನವನ ಕ್ಷೇತ್ರಗಳನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಆಯುಕ್ತರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹಾಗೂ ನಾಗರೀಕ ಸೌಲಭ್ಯ ಕ್ಷೇತ್ರವನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಆಯುಕ್ತರು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಇವರಿಗೆ ಹಸ್ತಾಂತರಿಸತಕ್ಕದ್ದು.

4. ಅಂದಾಜು ಪತ್ರಿಕೆಗಳಲ್ಲಿಯ ಸ್ಪೆಸಿಫೀಕೇಶನ್ ಪ್ರಕಾರ ಎಲ್ಲ ಕಾಮಗಾರಿಗಳನ್ನು ಮಾಡಬೇಕು. ಪ್ರಾಧಿಕಾರದ ಅಭಿಯಂತರರು, ಸ್ಥಳ ಪರಿವೀಕ್ಷಣೆಯ ಕಾಲದಲ್ಲಿ ಯಾವದೇ ಬದಲಾವಣೆಗಳನ್ನು ಸೂಚಿಸಿದಲ್ಲಿ ಸದರ ಬದಲಾವಣೆಗಳನ್ನು ಕಾರ್ಯಗತಗೊಳಿಸತಕ್ಕದ್ದು.

5. ಅಭಿವೃಧ್ಧಿ ಕಾರ್ಯಗಳು ಮುಗಿದ ನಂತರ ಸದರಿ ವಿನ್ಯಾಸವನ್ನು ಪ್ರಾಧಿಕಾರದ ಅಭಿಯಂತರರಿಗೆ ತೋರಿಸಿ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆದುಕೊಳ್ಳಬೇಕು.

6. ನೀರು ಸರಬರಾಜು ಹಾಗೂ ಒಳಚರಂಡಿ ಕಾಮಗಾರಿಗಳ ಸಲುವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರನ್ನು ಸಂಪರ್ಕಿಸಿ ಅವರ ಮೇಲ್ವಿಚಾರಣೆಯಲ್ಲಿ ಅವರ ನಿರ್ದೇಶನದಂತೆ ಸದರಿ ಕೆಲಸಗಳನ್ನು ಪೂರೈಸಬೇಕು. ಈ ಎಲ್ಲ ಕೆಲಸಗಳು ಮುಗಿದ ನಂತರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರಿಂದ ನಿರಾಪೇಕ್ಷಣಾ ಪ್ರಮಾಣ ಪತ್ರವನ್ನು ಪಡೆದು, ಪ್ರಾಧಿಕಾರಕ್ಕೆ ಅಂತಿಮ ಮುಕ್ತಾಯ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸುವಾಗ ಅವುಗಳನ್ನು ಸಲ್ಲಿಸತಕ್ಕದ್ದು.

7. ಯೋಜನಾ ಶಾಖೆಯಿಂದ ವಸತಿ ವಿನ್ಯಾಸದ ಅನುಮೋದನೆ ನೀಡುವ ಪತ್ರದಲ್ಲಿ ನಮೂದಿಸಿದ ಕರಾರುಗಳಿಗೆ ಬದ್ದರಾಗಿರಬೇಕು

ಆಯುಕ್ತರು,
ಹುಬ್ಬಳ್ಳಿ-ಧಾರವಾಡ ನಗರಾಭಿವೃಧ್ಧಿ ಪ್ರಾಧಿಕಾರ,
ಹುಬ್ಬಳ್ಳಿ.

**ಪ್ರತಿಯನ್ನು :**

1. ನಗರ ಯೋಜಕ ಸದಸ್ಯರು, ಹು.ಧಾ.ನ.ಪ್ರಾಧಿಕಾರ, ಹುಬ್ಬಳ್ಳಿ, ಇವರ ಮಾಹಿತಿಗಾಗಿ ಕಳಿಸಲಾಗಿದೆ.
2. ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯ ಹಾಗೂ ಪಾಲನೆ ವಿಭಾಗ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.